# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (381)394
ಸದಸ್ಯರ ಹೆಸರು : ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 23-09-2020
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

| ಪ್ರಶ್ನೆ | ಉತ್ತರ |
|---|---|
| (ಅ) ರಾಜ್ಯದಲ್ಲಿ ಕಳೆದ ವರ್ಷದಂತೆ ಈ ವರ್ಷವೂ ಭಾರಿ ಮಳೆ ಸಂಭವಿಸುತ್ತಿದ್ದು, ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು;<br>(ಆ) ಈ ಬಗ್ಗೆ ಸರ್ಕಾರ ಯಾಕೆ ಮುಂಜಾಗ್ರತೆ ಕ್ರಮ ಕೈಗೊಂಡಿಲ್ಲ; ಪ್ರವಾಹದಿಂದ ಉಂಟಾದ ನಷ್ಟವೆಷ್ಟು; (ರಾಜ್ಯವಾರು ವಿವರ ನೀಡುವುದು) | ಸರ್ಕಾರದಿಂದ ಕೈಗೊಂಡ ಕ್ರಮಗಳ ವಿವರವನ್ನು ಅನುಬಂಧ-1 ರಲ್ಲಿ ಪ್ರವಾಹದಿಂದ ಉಂಟಾದ ನಷ್ಟದ ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಿದೆ. |
| (ಇ) ಕಳೆದ ವರ್ಷ ಪ್ರವಾಹಕ್ಕೆ ನಲುಗಿ ಮನೆ ಮಠ ಕಳೆದುಕೊಂಡವರಿಗೆ ಸವಲತ್ತುಗಳು ದೊರಕಿದೆಯೇ; ಹಾಗೂ ಇನ್ನು ಹಲವರಿಗೆ ಬರಬೇಕಾದದ್ದು ಸರಿಯಾಗಿ ತಲುಪಿಲ್ಲ ಎಂಬ ಆಪಾದನೆ ಇರುವುದು ನಿಜವೇ; (ವಿವರ ನೀಡುವುದು) | 2019ನೇ ಸಾಲಿನಲ್ಲಿ ಪ್ರವಾಹ ಪರಿಹಾರಕ್ಕಾಗಿ ಎಸ್.ಡಿ.ಆರ್.ಎಫ್ ರಡಿ ರೂ.521.00 ಕೋಟಿ, ಮೂಲಭೂತ ಸೌಕರ್ಯಗಳ ದುರಸ್ತಿಗಾಗಿ ರೂ.500.00 ಕೋಟಿ, ಮನೆ ಹಾನಿ ಪರಿಹಾರಕ್ಕಾಗಿ ವಸತಿ ಇಲಾಖೆಯಿಂದ ರೂ.1232.00 ಕೋಟಿ ಹಾಗೂ ಬೆಳೆ ಹಾನಿಗೆ ಇನ್‌ಪುಟ್ ಸಬ್ಸಿಡಿ ಪಾವತಿಸಲು ರೂ.1200.00 ಕೋಟಿ ಬಿಡುಗಡೆಯಾಗಿದ್ದು ಅರ್ಹ ಫಲಾನುಭವಿಗಳಿಗೆ ಪರಿಹಾರ ದೊರಕಿರುತ್ತದೆ.<br><br>ಆಧಾರ್ ಕಾರ್ಡ್, ಪಡಿತರ ಚೀಟಿ ಮೊದಲಾದ ದಾಖಲೆಗಳು ಹೊಂದಾಣಿಕೆಯಾಗದಂತಹ ಕುಟುಂಬಗಳಿಗೆ, ಅನಧಿಕೃತ ನಿವೇಶನಗಳು ಮತ್ತು ಕೌಟುಂಬಿಕ ತರಕಾರುಗಳು, ನ್ಯಾಯಾಲಯ ಪ್ರಕರಣಗಳಿರುವಂತಹ ಕುಟುಂಬಗಳಿಗೆ ಅಗತ್ಯ ಪರಿಹಾರವನ್ನು ಪಾವತಿಸುವಲ್ಲಿ ತೊಡಕಾಗಿರುತ್ತದೆ. |
| (ಈ) ಹಾಗಿದ್ದಲ್ಲಿ ಕಳೆದ ವರ್ಷ ಭಾರೀ ಪ್ರವಾಹಕ್ಕೆ ಸಿಲುಕಿದ ಜನರಿಗೆ ಕೊಟ್ಟ ಪರಿಹಾರದ ಮೊತ್ತವೆಷ್ಟು? (ಜಿಲ್ಲಾವಾರು ವಿವರ ನೀಡುವುದು) | 2019 ಪ್ರವಾಹದಿಂದ ಬೆಳೆ ಹಾನಿಯಾದ 6,52,947 ರೈತರ ಬ್ಯಾಂಕ್ ಖಾತೆಗೆ ರೂ.1202.04 ಕೋಟಿಗಳನ್ನು ಜಮೆ ಮಾಡಲಾಗಿದೆ. 1,25,921 ಮನೆ ಹಾನಿಯಾದ ಪ್ರಕರಣಗಳಿಗೆ ರೂ.1400.86 ಕೋಟಿಗಳನ್ನು ಪಾವತಿಸಲಾಗಿದೆ. |

*ಕಂಇ 435 ಟಿಎನ್‌ಆರ್ 2020*

(ಆರ್. ಅಶೋಕ)
ಕಂದಾಯ ಸಚಿವರು

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್.ಎಲ್. ಭೋಜೇಗೌಡ ಇವರ ಚು.ರ.ಪ್ರ.ಸಂ: 381 ಕ್ಕೆ ಅನುಬಂಧ-1**

## ವಿಪತ್ತುಗಳನ್ನು ಎದುರಿಸಲು ಸರ್ಕಾರದಿಂದ ಕೈಗೊಂಡ ಕ್ರಮಗಳು

- ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಪ್ರವಾಹದಿಂದ ಉಂಟಾಗುವ ಅನಾಹುತಗಳನ್ನು ತಡೆಗಟ್ಟಲು ಕಂದಾಯ ಸಚಿವರ ಮೂಲಕ ಜಿಲ್ಲಾಧಿಕಾರಿಗಳಿಗೆ ವಿಡಿಯೋ ಸಂವಾದ ನಡೆಸಿ ಸಲಹೆ ಸೂಚನೆಗಳನ್ನು ನೀಡಲಾಗಿದೆ.
- ಪ್ರಕೃತಿ ವಿಕೋಪ ಸಲಹಾ ಸಮಿತಿ ಸಭೆಯನ್ನು ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ನಡೆಸಲಾಗಿದೆ. ಸದರಿ ತಂಡದ ಸಲಹೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.
- ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ ಗ್ರಾಮ ಪಂಚಾಯಿತಿವಾರು ವಿಪತ್ತು ನಿರ್ವಹಣಾ ಯೋಜನೆಯನ್ನು ರಚಿಸಲಾಗಿದೆ.
- 13 ಜಿಲ್ಲೆಗಳ 912 ಸಮಸ್ಯಾತ್ಮಕ ಗ್ರಾಮಗಳನ್ನು ಗುರುತಿಸಿ, ಗ್ರಾಮಪಂಚಾಯಿತಿ ವಿಪತ್ತು ನಿರ್ವಹಣಾ ಯೋಜನೆಯನ್ನು ರಚಿಸಲು ತೀರ್ಮಾನಿಸಲಾಗಿದೆ. ಪ್ರಸ್ತುತ 512 ಗ್ರಾಮ ಪಂಚಾಯಿತಿ ಯೋಜನೆ ರಚಿಸಲಾಗಿದ್ದು, ಉಳಿದ ಯೋಜನೆಗಳು ಅಂತಿಮ ಹಂತದಲ್ಲಿದೆ.
- ಸದರಿ ಗ್ರಾಮಗಳ, ಗ್ರಾಮ ಪಂಚಾಯಿತಿ ಅಧ್ಯಕ್ಷರ, ಅಧ್ಯಕ್ಷತೆಯಲ್ಲಿ ವಿಪತ್ತು ನಿರ್ವಹಣಾ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯ ಶಿಫಾರಸ್ಸಿನನ್ವಯ ಗ್ರಾಮ ಮಟ್ಟದಲ್ಲಿ ವಿಪತ್ತು ನಿರ್ವಹಣಾ ತಂಡಗಳನ್ನು ರಚಿಸಲಾಗಿದೆ.
- ವಿಪತ್ತು ನಿರ್ವಹಣಾ ತಂಡಗಳಿಗೆ ನೆರೆ ಪರಿಹಾರ ಹಾಗೂ ಕೋವಿಡ್-19 ಸಾಂಕ್ರಾಮಿಕ ಸೋಂಕು ನಿಯಂತ್ರಿಸಲು ಅವಶ್ಯ ತರಬೇತಿ ನೀಡಲಾಗಿದೆ.
- ಸದರಿ ತಂಡಗಳ ಕಾರ್ಯಯೋಜನೆಯನ್ನು ಪರಿಶೀಲಿಸಲು ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ವಿಡಿಯೋ ಸಂವಾದ ನಡೆಸಲಾಗಿದೆ.
- ರಾಷ್ಟ್ರೀಯ ವಿಪತ್ತು ನಿರ್ವಹಣಾ ಕಾಯ್ದೆ-2005 ರನ್ವಯ 20 ಇಲಾಖೆಗಳ ಮೂಲಕ ಇಲಾಖಾ ವಿಪತ್ತು ನಿರ್ವಹಣಾ ಯೋಜನೆಯನ್ನು ರಚಿಸಲು ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ತೀರ್ಮಾನಿಸಿದ್ದು, ಇದರ ಪೈಕಿ 15 ಇಲಾಖೆಗಳು ಇಲಾಖಾ ವಿಪತ್ತು ನಿರ್ವಹಣಾ ಯೋಜನೆಯನ್ನು ಅಂತಿಮಗೊಳಿಸಿದೆ. ಸದರಿ ಯೋಜನೆಯಡಿ ವಿಪತ್ತುಗಳ ಪೂರ್ವದಲ್ಲಿ ಹಾಗೂ ವಿಪತ್ತು ಉಂಟಾದ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಕ್ರಮಗಳನ್ನು ಒಳಗೊಂಡಿದ್ದು, ಸಂಬಂಧಪಟ್ಟ ಇಲಾಖೆಗಳಿಂದ ಅನುಷ್ಠಾನಗೊಳಿಸಲಾಗುತ್ತದೆ.
- ರಾಷ್ಟ್ರೀಯ ವಿಪತ್ತು ನಿರ್ವಹಣಾ ಯೋಜನೆಯನುಸಾರ ರಾಜ್ಯ ವಿಪತ್ತು ನಿರ್ವಹಣಾ ಯೋಜನೆ-2020-21ನ್ನು ರಚಿಸಲಾಗಿದೆ. ಸದರಿ ಯೋಜನೆಯನುಸಾರ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾ ಯೋಜನೆಗಳನ್ನು ರಚಿಸಲಾಗಿದೆ.
- ರಾಷ್ಟ್ರೀಯ ವಿಪತ್ತಿ ನಿರ್ವಹಣಾ ಪ್ರಾಧಿಕಾರ (National Disaster Management Authority) ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ನಗರ ಪ್ರದೇಶದಲ್ಲಿ ಪ್ರವಾಹ ಎದುರಿಸಲು ಮಾರ್ಗಸೂಚಿ ಹೊರಡಿಸಲಾಗಿದೆ.

ಅನುಬಂಧ - 2

Annexure - A

# REVISED STATEMENT SHOWING AMOUNT REQUIRED FOR RELIEF, RESCUE AND EMERGENT WORKS DUE TO FLOOD DURING AUGUST 2020

Rs.Crores

| Sl.No | Item | Quantity | Estimated Loss | As per SDRF Norms |
|---|---|---|---|---|
| 1 | Agriculture Crop loss | 3,57,426 ha | 5087.20 | 283.78 |
| 2 | Horticulture crop loss | 52,759 ha | 370.63 | 62.43 |
| 3 | Plantation Crop loss | 50,208 ha | 549.62 | 61.92 |
| 4 | Desilting and Agriculture Land loss | 1305 ha | 11.36 | 2.57 |
| 5 | Animal death | 344 | 1.76 | 0.52 |
| 6 | House damage | 13573 | 159.33 | 34.67 |
| 7 | Relief camps | 92 | | 0.76 |
| 8 | Other relief items | | | 10.46 |
| | **Total (A)** | | **6179.90** | **457.13** |
| | **Damage to Infrastructure** | | | |
| 1 | Damage to Roads (a+b+c) (Kms) | **21173** | **2428.53** | **141.23** |
| | a) State Highways and MDRs (Kms) | 3546 | 1534.96 | 35.46 |
| | b) Rural Roads (Village Roads) (Kms) | 15985 | 747.70 | 95.92 |
| | c) Urban Roads (Kms) | 1642 | 145.86 | 9.85 |
| 2 | Damage to bridges (Nos) | 2758 | 460.47 | 16.55 |
| 3 | Minor Irrigation (Schemes) | 786 | 187.15 | 11.79 |
| 4 | Restoration of Damaged electrical equipments | | 37.74 | 43.02 |
| 5 | Tanks (MI and ZP) (Nos) | 503 | 44.10 | 7.55 |
| 6 | Damage to Govt Building (nos) | 3669 | 89.14 | 73.38 |
| 7 | Water supply and Sanitation (nos) | 118 | 4.88 | 1.77 |
| 8 | Drinking water Supply Schemes (nos) | 219 | 8.96 | 3.29 |
| | **Total (B)** | | **3260.96** | **298.56** |
| | **Grand Total (A+B)** | | **9440.85** | **755.69** |